ಬಸವಶ್ರೀ ವಸತಿ ಯೋಜನೆಗೆ ಹಣ ಬಿಡುಗಡೆ

1423(1943); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಬಾಲ್ಕಿ)

ಅ) ಭಾಲ್ಕಿ ತಾಲ್ಲೂಕಿನಲ್ಲಿ ಬಸವಶ್ರೀ ವಸತಿ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳು ಸಂಪೂರ್ಣವಾಗಿ ಮುಗಿದಿವೆಯೇ; (ವಿವರ ನೀಡುವುದು);

ಆ) ಸರ್ಕಾರದ ವತಿಯಿಂದ 1ನೇ,2ನೇ 3ನೇ ಮತ್ತು 4ನೇ ಕಂತುಗಳು ಯಾವ ದಿನಾಂಕದಂದು ಬಿಡುಗಡೆಯಾಗಿದೆ; (ವಿವರ ನೀಡುವುದು)

ಇ) ಈ ಯೋಜನೆಯಡಿಯಲ್ಲಿ 2012ನೇ ಸಾಲಿನ ಫಲಾನುಭವಿಗಳು ಮನೆ ನಿರ್ಮಿಸಿದ್ದರೂ, ಸರಿಯಾದ ಸಮಯದಲ್ಲಿ ಜಿ.ಪಿ.ಎಸ್ ಅಳವಡಿಸದೇ ಇರುವುದರಿಂದ ಇದುವರೆಗೂ ಹಣ ಬಿಡುಗಡೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಯಾವಾಗ ಹಣ ಬಿಡುಗಡೆ ಮಾಡಲಾಗುವುದು? (ವಿವರ ನೀಡುವುದು)

ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) ಭಾಲ್ಕಿ ತಾಲ್ಲೂಕಿಗೆ ಬಸವ ವಸತಿ ಯೋಜನೆಯಡಿ ಮಂಜೂರಾದ ಮನೆಗಳ ವಿವರ ಇಂತಿದೆ:

ಶ್ರೇಣಿ	ಫಲಾನುಭವಿಗಳ ಆಯ್ಕೆ	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು	ಪ್ರಾರಂಭವಾಗದ ಮನೆಗಳು
201-11	5292	1229	945	3118
2013-14	424	0	0	424
ಒಟ್ಟು	5716	1229	945	3542

ಆ) 1,2,3 ಮತ್ತು 4ನೇ ಕಂತಿನ ಅನುದಾನವನ್ನು ತಳಪಾಯ, ಕಿಟಕಿ, ಛಾವಣಿ ಮತ್ತು ಪೂರ್ಣಗೊಂಡ ಮನೆಗಳ ಹಂತದ ಜಿ.ಪಿ.ಎಸ್ ಪ್ರಗತಿಯ ಆಧಾರದ ಮೇಲೆ ಬಿಡುಗಡೆ ಮಾಡಲಾಗುತ್ತಿದೆ. ಇದಕ್ಕೆ ಯಾವುದೇ ನಿರ್ದಿಷ್ಟ ದಿನಾಂಕವನ್ನು ನಿಗದಿಪಡಿಸಿರುವುದಿಲ್ಲ.

ಇ) ಬಂದಿರುವುದಿಲ್ಲ.

ಈ) ಸರ್ಕಾರವು ಅನುದಾನವನ್ನು ಪ್ರತಿ ವಾರಕ್ಕೊಮ್ಮೆ ಜಿಪಿಎಸ್ ಆಧಾರಿತ ಪ್ರಗತಿ ವರದಿಯ ಮೇಲೆ ನೇರವಾಗಿ ಫಲಾನುಭವಿಗಳ ಖಾತೆಗೆ ಬಿಡುಗಡೆ ಮಾಡುತ್ತಿದೆ.

ಬೈಂದೂರು ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ.

1425(958); ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು)

ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ಬೈಂದೂರು ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಉಪನ್ಯಾಸಕರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಹೆಚ್ಚುವರಿ ಉಪನ್ಯಾಸಕರ ಹುದ್ದೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಸದರಿ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಉಪನ್ಯಾಸಕರ ಸಂಖ್ಯೆ ಹಾಗೂ ಖಾಲಿ ಹುದ್ದೆಗಳ ಸಂಖ್ಯೆಗಳ ಮಾಹಿತಿಯನ್ನು ಒದಗಿಸುವುದು?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಬಂದಿದೆ

ಆ) ಇದೆ